**ಸಾಕ್ಷಿಯನ್ನು ದಿಃ 03.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದಃ**

ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇದೆ. ನಾನು ನಮ್ಮ ಊರಿನಿಂದ ಬರುತ್ತಿದ್ದಾಗ ಸಂಜೆ 06.00 ಗಂಟೆಗೆ ಅಪಘಾತ ಆಗಿದೆ. ಅದು ಯಾವ ಅಡ್ಡ ರಸ್ತೆಯಿಂದ ವಾಹನ ಬಂದು ಅಪಘಾತ ಪಡಿಸಿತು ಎಂದು ನನಗೆ ಗೊತ್ತಿಲ್ಲ. ಅಪಘಾತ ಆದಾಗ ನಾನೊಬ್ಬನೆ ಇದ್ದೆ. ನನ್ನ ಜೊತೆ ಬೇರೆ ಯಾರು ಇರಲಿಲ್ಲ. ಅಪಘಾತ ಆದ ಎಷ್ಟು ಸಮಯಕ್ಕೆ ನಂತರ ನನ್ನ ಮಗ ಬಂದಿದ್ದ ಎಂದು ನನಗೆ ನೆನಪಿಲ್ಲ. ನನ್ನನ್ನು ಸರಗೂರಿನ ವಿವೇಕಾನಂದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಮೈಸೂರಿನ ಆಸ್ಪತ್ರೆಯಲ್ಲಿ ನನಗೆ ಪ್ರಜ್ಞೆ ಬಂದಿದೆ. ಮೈಸೂರಿನ ಆಸ್ಪತ್ರೆಯ ಹೆಸರು ನೆನಪಿಲ್ಲ. ಸರಗೂರಿನ ಆಸ್ಪತ್ರೆಯಲ್ಲಿ ನನಗೆ ಪ್ರಜ್ಞೆ ಇರಲಿಲ್ಲ, ಮಗ ಎಷ್ಟು ಗಂಟೆಗೆ ಬಂದಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ಗೋವಿಂದಶೆಟ್ಟಿ ರವರ ಮಗ ಸ್ವಾಮಿ ನನಗೆ ಪರಿಚಿತ. ಅವರು ಅಪಘಾತ ಸ್ಥಳದಲ್ಲಿ ಆ ದಿನ ಇರಲಿಲ್ಲ ಎಂದರೆ ಸರಿ.

2. ಯಾವ ವಾಹನ ನನಗೆ ಅಪಘಾತ ಪಡಿಸಿತು ಎಂದು ನನಗೆ ನೆನಪಿಲ್ಲ. ಸಿ.ಸಿ. ಕ್ಯಾಮರಾದ ಮೂಲಕ ನನಗೆ ಅಪಘಾತ ಪಡಿಸಿದ ವಾಹನವನ್ನು ಕಂಡು ಹಿಡಿದಿದ್ದಾರೆ. ಅಪಘಾತ ಪಡಿಸಿದ ವಾಹನದ ಸಂಖ್ಯೆ ನನಗೆ ಇವತ್ತಿನವರೆಗೂ ಗೊತ್ತಿಲ್ಲ. ನನ್ನ ಮಗ ದೂರು ನೀಡುವಾಗಲೂ ಅವನಿಗೆ ವಾಹನದ ಸಂಖ್ಯೆ ಗೊತ್ತಿರಲಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರಗೂರು ಆಸ್ಪತ್ರೆಯಲ್ಲಿ ಅಪಘಾತದ ಹಿನ್ನಲೆಯನ್ನು ಯಾರು ಹೇಳಿ ಬರೆಯಿಸಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಆಸ್ಪತ್ರೆಗೆ ನನ್ನನ್ನು ಯಾರು ಕರೆದುಕೊಂಡು ಹೋದರು ಎಂದು ನನಗೆ ಮಾಹಿತಿ ಇಲ್ಲ. ಮೈಸೂರಿನ ಆಸ್ಪತ್ರೆಗೆ ಬಂದ ಮೂರು ದಿನದ ನಂತರ ಪ್ರಜ್ಞೆ ಬಂದಿದೆ. ಆಸ್ಪತ್ರೆಯ ಹೆಸರು ನನಗೆ ಗೊತ್ತಿಲ್ಲ. ನನಗೆ ಪ್ರಜ್ಞೆ ತಪ್ಪಿರಲಿಲ್ಲ ಎಂದರೆ ಸರಿಯಲ್ಲ.

3. ಆ ದಿನ ನಾನು ಕುಡಿದು ಬಿದ್ದು ಗಾಯಗೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ವಾಹನ ಡಿಕ್ಕಿಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತ ವಾಹನ ಅಪಘಾತ ಪಡಿಸದೇ ಇರುವ ಕಾರಣ ಅದಕ್ಕೆ ಜಖಂಗಳು ಆಗಿಲ್ಲ ಎಂದರೆ ಸರಿಯಲ್ಲ.

4. ನಾನು ಮೈಸೂರಿನಲ್ಲಿ ಲೋಡರ್ ಕೆಲಸ ಮಾಡುತ್ತಾನೆ. ಈಗ ಯಾವುದೇ ಕೆಲಸ ಮಾಡಲು ಆಗುತ್ತಿಲ್ಲ. ಕೊನೆಯಬಾರಿ ಆಸ್ಪತ್ರೆಗೆ ಯಾವಾಗ ಹೋಗಿದ್ದೇನೆ ಎಂದು ನೆನಪಿಲ್ಲ. ಹಾಗಾಗ ನನ್ನ ಹೆಂಡತಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾಳೆ. ನಾನು ಮೊದಲಿನ ತರಹ ಕೆಲಸ ಮಾಡಿಕೊಂಡಿದ್ದೇನೆ ಹೆಚ್ಚಿನ ಪರಿಹಾರಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೂ. 30,000/- ದುಡಿಯುತ್ತಿದ್ದೆ ಎಂದು ತೋರಿಸಲು ದಾಖಲೆ ಇಲ್ಲ. ನಿಪಿ. 12 ರಲ್ಲಿ ನನ್ನ ಜನ್ಮ ದಿನಾಂಕ ಸರಿ ಇದೆ.

5. ನನಗೆ ಚಿಕಿತ್ಸೆ ನೀಡಿದ ವೈಧ್ಯರ ಹೆಸರು ಹೇಳಲು ಆಗುವುದಿಲ್ಲ. ಪ್ರಶ್ನೆಗೆ ಅರ್ಥಮಾಡಿಕೊಂಡು ಉತ್ತರ ಕೊಟ್ಟಿದ್ದೇನೆ. ನಾನಾಗಿ ಬಿದ್ದು ಪೆಟ್ಟುಮಾಡಿಕೊಂಡ ಕಾರಣ ಔಷಧಿ ಬಿಲ್ಲುಗಳನ್ನಾಗಲೀ ಪರಿಹಾರವನ್ನಾಗಲೀ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

1 ಮತ್ತು 2ನೇ ಎದುರುದಾರರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.